ಸಾಕ್ಷಿಯನ್ನು ದಿಃ **05.11.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ 1 ನೇ ಪ್ರತಿವಾದಿ ರವರ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ–**

ವಾದಿ ಈ ದಾವೆಯನ್ನು ವಿಭಾಗ ಕೋರಿ ಹಾಕಿದ್ದಾರೆ. ನನ್ನ ಪ್ರತಿವಾದ ಪತ್ರ ಮತುತ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ನನ್ನ ತಾತನ ಹೆಸರು ಚಿಕ್ಕತಮ್ಮೇಗೌಡ ಅಲಿಯಾಸ್ ಬೋರೇಗೌಡ. ನನ್ನ ತಾತನ ತಂದೆಯ ಹೆಸರು ಗೊತ್ತಿಲ್ಲ. ನನ್ನ ತಾತನಿಗೆ ಒಟ್ಟು 4 ಗಂಡು 3 ಹೆಣ್ಣು ಮಕ್ಕಳು. ಆ ಪೈಕಿ ನನ್ನ ತಂದೆ ಹಿರಿಮಗ. ನನ್ನ ತಂದೆ ನಾನು ಚಿಕ್ಕವನಿದ್ದಾಗಲೆ ಒಟ್ಟು ಕುಟುಂಬದಿಂದ ಹೊರಗೆ ಬಂದಿದ್ದಾರೆ ಯಾವಾಗ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಒಟ್ಟು ಕುಟುಂಬದಿಂದ ಹೊರಗೆ ಬಂದ ನಂತರ ನನ್ನ ಚಿಕ್ಕಪ್ಪಂದಿರು ಮತ್ತು ನನ್ನ ತಾತ ಒಟ್ಟಿಗೆ ಇದ್ದರು.

ದಾವಾ ಐಟಂ ನಂಬರ್ 1 ರ ವಿಸ್ತೀರ್ಣ 11 ಎಕರೆ 3 ಗುಂಟೆ. ಒಟ್ಟು 23 ರಿಂದ 24 ಎಕರೆ ಜಮೀನು ಬರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ನನಗೆ 6 ಎಕರೆ 6 ಗುಂಟೆ ಮತ್ತು ನನ್ನ ಅಣ್ಣನಾದ 1 ನೇ ಪ್ರತಿವಾದಿಗೆ 4 ಎಕರೆ 37 ಗುಂಟೆಯಿದೆ. ದಾವಾ ಐಟಂ ನಂಬರ್ 1 ರಲ್ಲಿ 23 ಎಕರೆ 14 ಗುಂಟೆಯ ಪೈಕಿ 12 ಎಕರೆ 11 ಗುಂಟೆ ಭೂಸ್ವಾಧೀನಗೊಂಡಿದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸರ್ವೆ ನಂಬರ್ 1/17 + 20 ಎ ಅಲ್ಲಿ 4 ಎಕರೆ 19 ಗುಂಟೆ ಹಾಗೂ ಸರ್ವೆ ನಂಬರ್ 1/16 ಬಿ ಅಲ್ಲಿ 2 ಎಕರೆ 20 ಗುಂಟೆ ಭೂಸ್ವಾಧೀನಗೊಂಡಿದೆ. ಸದರಿ ಜಮೀನು ತುರುಕನಕಟ್ಟೆ ಕೆರೆಗಾಗಿ ಭೂಸ್ವಾಧೀನವಾಗಿದೆ. ಸದರಿ ಭೂಸ್ವಾಧೀನ ಯಾವಾಗ ಆಯಿತು ಮತ್ತು ನನ್ನ ತಂದೆಗೆ ಯಾವಾಗ ಆ ಬಗ್ಗೆ ನೋಟೀಸು ಬಂತು ಎಂದು ಗೊತ್ತಿಲ್ಲ. ಸದರಿ ವಿಷಯದ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಮೇಲೆ ಹೇಳಿದ ಜಮೀನುಗಳ ಭೂಸ್ವಾಧೀನದಿಂದ ಬಂದ ಪರಿಹಾರದ ಹಣವನ್ನು ನನ್ನ ತಂದೆ ಸ್ವೀಕರಿಸಿದ್ದಾರೆ.

ಎಲ್ ಎ ಸಿ ನಂಬರ್ 4/1982 ಮತ್ತು ಎಲ್ ಎ ಸಿ 14/1982 ಪ್ರಕರಣಗಳು ಹುಣಸೂರು ನ್ಯಾಯಾಲಯದಲ್ಲಿ ಇದ್ದವು ಎಂದರೆ ಸರಿ. ಅದರಲ್ಲಿರುವ ಬಿ ಕೆಂಪೇಗೌಡ ಬಿನ್ ಬೋರೇಗೌಡ ಎಂದರೆ ನನ್ನ ತಂದೆ. ನಾನು 7 ನೇ ತರಗತಿ ಓದಿದ್ದೇನೆ. ನಾನು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ. ನನ್ನ ತಂದೆ ಈ ಹಿಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು ಆರೋಗ್ಯ ಸರಿಯಿಲ್ಲದಿದ್ದ ಕಾರಣ ಹೆಬ್ಬೆಟ್ಟು ಹಾಕಲು ಪ್ರಾರಂಭಿಸಿದರು. 2010 ರಿಂದ 2012 ರಲ್ಲಿ ನನ್ನ ತಂದೆಗೆ ಆರೋಗ್ಯ ಸರಿಯಿರಲಿಲ್ಲ. ಸದರಿ ಪರಿಹಾರದ ಹಣವನ್ನು ಮೊದಲ ಬಾರಿಗೆ ನನ್ನ ತಂದೆ ಯಾವಾಗ ತೆಗೆದುಕೊಂಡರೆಂದು ಗೊತ್ತಿಲ್ಲ.

ದಾವಾ ಐಟಂ ನಂಬರ್ 1 ರಿಂದ 3 ರ ದಾಖಲೆಗಳನ್ನು ನೋಡಿದ್ದೇನೆ. ನನ್ನ ತಂದೆಯ ಹೆಸರಿನಲ್ಲಿದ್ದ ದಾಖಲೆಗಳನ್ನು ನೋಡಿದ್ದೇನೆ. ನಿಡಿ 14 ರ ದಾಖಲೆಯಲ್ಲಿ ಬರೆದಿರುವ ಬೋರೇಗೌಡ ಬಿನ್ ಕೆಂಪಾರೇಗೌಡ ರವರಿಂದ ಅವರ ಮಕ್ಕಳಾದ ಬಿ ಕೆಂಪೇಗೌಡರಿಗೆ ಎಂದರೆ ನನ್ನ ತಂದೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ನನ್ನ ತಂದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಕಂದಾಯ ದಾಖಲೆಗಳನ್ನು ವ್ಯಕ್ತಿಯ ಅನುಭವದ ಆಧಾರದ ಮೇಲೆ ಕೊಡುತ್ತಾರೆ  ಎಂದರೆ ಸರಿ. ನಿಡಿ 14 ರಲ್ಲಿ ಇರುವ ಹೆಸರು ನನ್ನ ತಂದೆಯದ್ದು ಆಗಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು  ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 3 ನನ್ನ ತಂದೆಗೆ ಹೇಗೆ ಬಂತು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕಾಡು ಕಡಿದು ಮಾಡಿದ್ದಾರೆಂದು ಗೊತ್ತು.  ದಾವಾ ಐಟಂ ನಂಬರ್ 1 ರಿಂದ 3 ನ್ನು ಕಾಡು ಕಡಿದು ಮಾಡಿದ್ದಾರೆಂದು ಗೊತ್ತಿದೆ. ಆ ಬಗ್ಗೆ ಸಾಗುವಳಿ ಪತ್ರ ಕೊಟ್ಟಿದ್ದಾರೆಯೇ ಎಂದರೆ ಇಲ್ಲ. ದಾವಾ ಐಟಂ ನಂಬರ್ 1 ರಿಂದ 3 ನನ್ನ ತಂದೆಗೆ ಅವರ ತಂದೆಯಿಂದ ವಿಭಾಗದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಎಂ ಆರ್ ನಂಬರ್ 1/74-75 ರ ಪ್ರಕಾರ ನನ್ನ ತಂದೆಯ ಹೆಸರಿಗೆ ಖಾತೆಯಿದೆ ಎಂದರೆ ಗೊತ್ತಿಲ್ಲ. ಆಸ್ತಿಗಳ ಬಗ್ಗೆ ನನಗಿಂತ ಚೆನ್ನಾಗಿ 1 ನೇ ಪ್ರತಿವಾದಿಗೆ ಗೊತ್ತಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಚಿಕ್ಕಂದಿನಿಂದ ಓದಿನ ಸಲುವಾಗಿ ಮೈಸೂರಿನಲ್ಲಿಯೇ ಇದ್ದರು. ದಾವಾ ಐಟಂ ನಂಬರ್ 1 ರಿಂದ 3 ನನ್ನ ತಂದೆಗೆ ಯಾವ ರೂಪದಲ್ಲಿ ಸ್ವಯಾರ್ಜಿತ ಎಂದು ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.